**<u>ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ</u>**

**<u>MVC No.1312/2021</u>**

RW-3

**ಸಾಕ್ಷಿಗೆ ದಿನಾಂಕ 28-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಹೆಸರು | ಃ | ಹೆಚ್.ಸಾಯಿ ಧರ್ಮೇಂದ್ರ |
| ತಂದೆ ಹೆಸರು | ಃ | ಹೆಚ್. ರವೀಂದ್ರ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಅಧೀಕ್ಷಕರು, RTO ಕಚೇರಿ ಕಲ್ಬುರ್ಗಿ |
| ವಾಸಸ್ಥಳ | ಃ | ಕಲ್ಬುರ್ಗಿ |

**<u>ಮುಖ್ಯ ವಿಚಾರಣೆಃ ಶ್ರೀ ವಿ.ಸಿ.ಎಂ.ಪಿ. 2ನೇ ಎದುರುದಾರ ಪರ ವಕೀಲರಿಂದಃ</u>**

2009 ರಿಂದ 2015 ವರೆಗೆ FDA ಹಾಗೂ 2015 ರಿಂದ ಇಲ್ಲಿಯವರೆಗೆ ಕಲಬುರಗಿ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಅಧೀಕ್ಷಕನೆಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಉಪಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಲ್ಬುರ್ಗಿರವರು ಪ್ರಸ್ತುತ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗಲು ನೀಡಿದ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್-2 ಅಂತಾ ಗುರುತಿಸಲಾಯಿತು.

ರಾಜು ತಂದೆ ರಾಮಯ್ಯರವರಿಗೆ ಸೇರಿದ ವಾಹನ ಚಾಲನಾ ಪರವಾನಿಗೆ ಪತ್ರದ extract ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್-3 ಅಂತಾ ಗುರುತಿಸಲಾಯಿತು. ಸದರಿ ರಾಜುರವರು ದಿನಾಂಕ 21-09-2021 ರಿಂದ 20-09-2026ರವರೆಗೆ Transport ವಾಹನ ಚಾಲನೆ ಮಾಡಲು ವಾಹನ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದರು. ದಿನಾಂಕ 28-04-2021 ರಂದು ಸದರಿ ರಾಜು ರಾಮಯ್ಯರವರಿಗೆ Non- Transport ವಾಹನ ಚಾಲನೆ ಮಾಡಲು ವಾಹನ ಚಾಲನಾ ಪರವಾನಿಗೆ ಪತ್ರ ನೀಡಲಾಗಿತ್ತು. ಸದರಿ ರಾಜುರವರಿಗೆ Transport (ಭಾರೀ ಸರಕು ವಾಹನ) ಚಾಲನೆ ಮಾಡಲು ಲೈಸೆನ್ಸ್ ಇರಲಿಲ್ಲ. ದಿನಾಂಕ 28-04-2021 ರಂದು ಸದರಿ ರಾಜು ತಂದೆ ರಾಮಯ್ಯರವರು Transport (ಭಾರೀ ಸರಕು ವಾಹನ) ಚಾಲನೆ ಮಾಡಲು ಲೈಸೆನ್ಸ್ ಪಡೆಯದೇ  Transport ವಾಹನವನ್ನು ಚಾಲನೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್.ಎ.ಕೆ. ಅರ್ಜಿದಾರರ ಪರ ವಕೀಲರಿಂದಃ**

ನಾನು ತಾಂತ್ರಿಕ ಅಧಿಕಾರ ಅಲ್ಲ ಎಂದರೆ ಸಾಕ್ಷಿ ನಮ್ಮ ಇಲಾಖೆಯಲ್ಲಿ ತಾಂತ್ರಿಕ ಹಾಗೂ ಅರೆ ತಾಂತ್ರಿಕ ವಿಭಾಗಗಳಿದ್ದು ತಾಂತ್ರಿಕ ವಿಭಾಗದಲ್ಲಿ National Informatics Centre ನಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ತಾಂತ್ರಿಕ ಕೆಲಸ ನಿರ್ವಹಿಸುವ ಸಿಬ್ಬಂದಿಗಳಾಗಿದ್ದು ಹಾಗೂ ಉಳಿದ ವಿಭಾಗದಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ಅರೆ ತಾಂತ್ರಿಕ ಸಿಬ್ಬಂದಿಗಳಾಗಿರುತ್ತಾರೆಂದು ನುಡಿಯುತ್ತಾರೆ. ನನಗೆ ಲೈಸೆನ್ಸ್ ನೀಡುವ ಅಧಿಕಾರ ಇಲ್ಲ ಎಂದರೆ ನಿಜ. ಲೈಸೆನ್ಸನಲ್ಲಿ ಎಷ್ಟು ಪ್ರಕಾರಗಳಿವೆ ಹಾಗೂ ಯಾವ ಪ್ರಕಾರದ ವಾಹನಕ್ಕೆ ಯಾವ ವಿಧದ ಲೈಸನ್ಸ್ ಬೇಕು ಎನ್ನುವುದರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಸರಿದ ವಿಚಾರದ ಬಗ್ಗೆ ಮಾಹಿತಿ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ರಾಜು ತಂದೆ ರಾಮಯ್ಯರವರ ದಿನಾಂಕ 09-10-2012 ರಿಂದ 07-07-2032ವರೆಗೆ ಲೈಸನ್ಸನ್ನು ಹೊಂದಿದ್ದರು ಎಂದರೆ ಸಾಕ್ಷಿ Non Transport ವಾಹನ ಚಾಲನೆ ಮಾಡಲು ಲೈಸೆನ್ಸ್ ಹೊಂದಿದ್ದರು ಎಂದು ನುಡಿಯುತ್ತಾರೆ. Non Transport ವಾಹನ ಎಷ್ಟು ಕೆ.ಜಿ ಯಿಂದ ಎಷ್ಟ ಕೆ.ಜಿವರೆಗೆ ಇರುತ್ತದೆ ಎಂದರೆ ಸಾಕ್ಷಿ 3500 ಕೆ.ಜಿ. ವರೆಗಿನ ತೂಕ ಇರುವ ವಾಹನ Non Transport ವಾಹನ ಆಗಿರುತ್ತದೆಂದು ನುಡಿಯುತ್ತಾರೆ. 3500 ಕೆ.ಜಿ. ವರೆಗಿನ ತೂಕ ಇರುವ ವಾಹನ Non Transport ವಾಹನ ಆಗಿರುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ರಾಜು ತಂದೆ ರಾಮಯ್ಯ ನಮ್ಮ ಕಚೇರಿಗೆ ಯಾವ ದಿನಾಂಕದಂದು Transport License ಬೇಕೆಂದು ಅರ್ಜಿ ಸಲ್ಲಿದ್ದರು ಎಂದು ಹೇಳಬಲ್ಲೆ. ಸದರಿ ರಾಜುರವರು ನನಗೆ ದಿನಾಂಕ 20-09-2021 ರಂದು Transport License ಅಂತಾ ಅರ್ಜಿ ಸಲ್ಲಿಸಿದ್ದರು. ರಾಜುರವರು ನನಗೆ ದಿನಾಂಕ 20-09-2021 ರಂದು Transport License ಅಂತಾ ಅರ್ಜಿ ಸಲ್ಲಿಸಿದ್ದರು ಅಂತಾ ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ . ಸಾಕ್ಷಿ ಮುಂದುವರೆದು ಎಲ್ಲಾ ಪರೀಕ್ಷೆಗಳಾದ ನಂತರ ನಾವು ಲೈಸೆನ್ಸ್ ನೀಡುವ ಒಂದು ದಿನದ ಪೂರ್ವದಲ್ಲಿ ಅರ್ಜಿದಾರರ ಅರ್ಜಿ ನಮ್ಮ ಬಳಿ ಬರುತ್ತದೆಂದು ನುಡಿಯುತ್ತಾರೆ. ನಾವು ಲೈಸೆನ್ಸ್ ನೀಡುವ ಒಂದು ದಿನದ ಪೂರ್ವದಲ್ಲಿ ಅರ್ಜಿದಾರರ ಅರ್ಜಿ ನಮ್ಮ ಬಳಿ ಬರುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ನಾವು ಲೈಸೆನ್ಸನ್ನು online ನಲ್ಲಿ ನೀಡುತ್ತಿದ್ದೇವೆಂದರೆ ನಿಜ. Online ನಲ್ಲಿ ಲೈಸೆನ್ಸನ್ನು ಯಾವ ನಿರ್ದಿಷ್ಟ ದಿನಾಂಕದಂದು ನೀಡುತ್ತಿದ್ದೀರಿ ಎಂದರೆ ಸಾಕ್ಷಿ ಅಕ್ಟೋಬರ್ 2009 ರಿಂದ ನೀಡುತ್ತಿದ್ದೇವೆಂದು ನುಡಿಯುತ್ತಾರೆ.

ಸದರಿ ರಾಜುರವರು Transport License ನೀಡಲು Online ನಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ Learning License ನ್ನು Online ನಲ್ಲಿ ನೀಡಲಾಗುತ್ತದೆ ಆದರೆ Heavy Driving License ಸಲುವಾಗಿ Driving School ನಲ್ಲಿ ತರಬೇತಿ ಪಡೆದುಕೊಳ್ಳಬೇಕೆಂದು ನುಡಿಯುತ್ತಾರೆ. ನಮ್ಮ ಕಚೇರಿಗೆ

License ನೀಡುವಂತೆ ಪಕ್ಷಗಾರರು ನೀಡುತ್ತಾರೆ ತರಬೇತಿ ಕೇಂದ್ರ ನೀಡಲ್ಲ. Onlineನಲ್ಲಿ ಅರ್ಜಿ ನೀಡಿದ ನಂತರ ಸದರಿ ಅರ್ಜಿಗೆ ಕ್ರಮಸಂಖ್ಯೆ ನೀಡಿ ಒಂದು ದಿನಾಂಕ ನಿಗದಿ ಮಾಡಿ ಅರ್ಜಿದಾರರಿಗೆ ಪರೀಕ್ಷೆಗೆ ಬರಲು ಸೂಚಿಸುತ್ತೇವೆ. ಸದರಿ ಅರ್ಜಿದಾರರು Trackನಲ್ಲಿ ಬಂದು ಪರೀಕ್ಷೆ ನೀಡಿ ಉತ್ತೀರ್ಣಗೊಂಡ ನಂತರ ಸದರಿ ಅರ್ಜಿದಾರರ ದಾಖಲಾತಿಗಳು ನಮ್ಮ ಕಚೇರಿಗೆ ಬಂದ ನಂತರ ಸದರಿ ದಾಖಲಾತಿಗಳಿಗೆ ನಾವು Approval ನೀಡುತ್ತೇವೆ. ಸದರಿ Approval ನೀಡಿದ ದಿನಾಂಕದಿಂದ ಲೈಸೆನ್ಸ್ ಜಾರಿಯಲ್ಲಿ ಬರುತ್ತದೆ.

ರಾಜುರವರು 28-04-2021ರ ಪೂರ್ವದಲ್ಲಿಯೇ Transport Vehicle ಚಾಲನಾ ಪರವಾನಿಗೆ ಪತ್ರ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ತಾಂತ್ರಿಕ ಅಧಿಕಾರಿಯಾಗಿರದೇ ಇರುವ ಕಾರಣ ಲೈಸೆನ್ಸ್ ವಿಚಾರಗಳ ಬಗ್ಗೆ ನನಗೆ ಸೂಕ್ತ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಳು ನನಗೆ ನ್ಯಾಯಾಲಯಕ್ಕೆ ಹಾಜರಾಗುವಂತೆ ಹೇಳಿದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಕೆ.ಇ.ಬಿ. 1ನೇ ಎದುರುದಾರ ಪರ ವಕೀಲರು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.**

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು ಜೇವರ್ಗಿ